

بِسْمِ اللَّهِ الرَّحْمَنِ الرَّحِيم

# ಜಾಗತಿಕ ಶಾಂತಿ ಅಹ್ಮದಿಯಾ ಖಿಲಾಫತ್‌ನೊಂದಿಗೆ ಜೋಡಿಸಲ್ಪಟ್ಟಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 26-05-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ಪಠಿಸಿದರು:*

وَعَدَ اللَّهُ الَّذِينَ آمَنُوا مِنكُمْ وَعَمِلُوا الصَّالِحَاتِ لَيَسْتَخْلِفَنَّهُمْ فِي الْأَرْضِ كَمَا اسْتَخْلَفَ الَّذِينَ مِن قَبْلِهِمْ وَلَيُمَكِّنَنَّ لَهُمْ دِينَهُمُ الَّذِي ارْتَضَىٰ لَهُمْ وَلَيُبَدِّلَنَّهُم مِّن بَعْدِ خَوْفِهِمْ أَمْنًا ۚ يَعْبُدُونَنِي لَا يُشْرِكُونَ بِي شَيْئًا ۚ وَمَن كَفَرَ بَعْدَ ذَٰلِكَ فَأُولَٰئِكَ هُمُ الْفَاسِقُونَ

**ವಅದಲ್ಲಾಹುಲ್ಲಝೀನ ಆಮನೂಮಿನ್‌ಕುಮ್ ವಅಮಿಲುಸ್ಸಾಲಿಹಾತಿ ಲಯಸ್ತಖ್‌ಲಿಫನ್ನಹುಮ್ ಪಿಲ್‌ಅರ್‌ಝಿ ಕಮಾಸ್ತಖ್‌ಲಫಲ್ಲದೀನ ಮಿನ್ ಖಬ್‌ಲಿಹಿಮ್. ವಲಯುಮಕ್ಕಿನನ್ನ ಲಹುಮ್ ದೀನಹುಮುಲ್ಲಧಿರ್‌ತಝಾ ಲಹುಮ್ ವಲಯುಬದ್ದಿಲನ್ನಹುಮ್ ಮಿನ್‌ಬಅ್‌ದಿ ಖೌಫಿಹಿಮ್ ಅಮ್‌ನ ಯಅ್‌ಬುದೂನನೀ ಲಾಯುಶ್‌ರಿಕೂನ ಬೀ ಶೈಅನ್ ವಮನ್ ಕಫರ ಬಅ್‌ದ ದ್ಹಾಲಿಕ ಫಉಲಾಯಿಕ ಹುಮುಲ್ ಫಾಸಿಖೂನ್.**

ನಿಮ್ಮ ಪೈಕಿ ವಿಶ್ವಾಸ ಹೊಂದಿ ಸತ್ಕರ್ಮಗೈಯುವವರಿಗೆ, ಅವರಿಗಿಂತ ಮುಂಚೆ ಇದ್ದವರನ್ನು ಖಲೀಫರನ್ನಾಗಿ ಮಾಡಿದಂತೆಯೇ ಖಂಡಿತವಾಗಿಯೂ ಅವರನ್ನು ಸಹ ಭೂಮಿಯಲ್ಲಿ ಖಲೀಫರನ್ನಾಗಿ ಮಾಡುವನೆಂದೂ ಅವರಿಗೋಸ್ಕರ ಅವನು ತೃಪ್ತಿಗೊಂಡ ಧರ್ಮವನ್ನು ಅವರಿಗೆ ಬಲಪಡಿಸಿ ಕೊಡುವನೆಂದೂ ಅವರ ಭಯಭೀತಿಯ ಬಳಿಕ ಅವರಿಗೆ ಸುರಕ್ಷತೆ ಮತ್ತು ನೆಮ್ಮದಿಯನ್ನು ದಯಪಾಲಿಸುವನೆಂದೂ ಅಲ್ಲಾಹನು ವಾಗ್ದಾನ ಮಾಡಿದ್ದಾನೆ. ಅವರು ನನ್ನನ್ನು ಮಾತ್ರ ಆರಾಧಿಸುವರು. ನನಗೆ ಯಾರನ್ನೂ ಸಹಭಾಗಿ ಮಾಡಲಾರರು. ಅನಂತರವೂ ಯಾರಾದರೂ ನಿರಾಕರಿಸಿದರೆ ಅವರೇ ಧಿಕ್ಕಾರಿಗಳು. (ಪವಿತ್ರ ಖುರ್‌ಆನ್ 24:56).

ಈ ವಚನದಲ್ಲಿ ಅಲ್ಲಾಹನು ಮುಸ್ಲಿಮರಿಗೆ ನೀಡಿದ ವಾಗ್ದಾನವನ್ನು ಎಂದರೆ ಇಸ್ಲಾಮ್‌ನಲ್ಲಿ ಖಿಲಾಫತ್ ಸ್ಥಾಪಿತವಾಗುವುದು ಎನ್ನುವುದನ್ನು ಪ್ರಸ್ತಾಪಿಸಿದ್ದಾನೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಹೇಳಿಕೆ ಪ್ರಕಾರ, ಮುಸ್ಲಿಮರ ಧಾರ್ಮಿಕ ಕರ್ಮಗಳ ಮತ್ತು ವಿಶ್ವಾಸದ ದುಸ್ಥಿತಿಯ ಕಾರಣದಿಂದ ಒಂದು ಕಾಲದವರೆಗೆ ಈ ಅನುಗ್ರಹವನ್ನು ಅವರಿಂದ ಕಿತ್ತುಕೊಳ್ಳಲಾಗುವುದು. ಅನಂತರ ಖಿಲಾಫತ್ ಅಲಾ ಮಿನ್‌ಹಾಜಿನ್ನುಬುವ್ವತ್ (ನುಬುವ್ವತ್ತಿನ ಮಾರ್ಗದಲ್ಲಿರುವ ಖಿಲಾಫತ್) ಲೋಕದಲ್ಲಿ ಪುನಃ ಸ್ಥಾಪಿಸಲ್ಪಡುವುದು. ಮತ್ತು ಅದು ಜಾರಿಯಲ್ಲಿರುವುದು. ಮುಸ್ಲಿಮರಲ್ಲಿ ಬಹುತೇಕ ಜನರು ಖಿಲಾಫತ್ ಯಾವ ರೀತಿ ಸ್ಥಾಪಿತವಾಗುವುದು ಎಂಬುದನ್ನು ಮನವರಿಕೆ ಮಾಡಿಕೊಂಡಿಲ್ಲ. ಮುಸ್ಲಿಮರಲ್ಲಿ ಒಂದು ದೊಡ್ಡ ವಿಭಾಗದ ಜನರು ಖಿಲಾಫತ್‌ನ ಆವಶ್ಯಕತೆಯೇ ಇಲ್ಲ ಎಂದು ಹೇಳುತ್ತಿದ್ದಾರೆ. ಯಾವ ಪಂಗಡಕ್ಕೆ ಒಬ್ಬನು ಸೇರಿರುತ್ತಾನೋ ಆ ಪಂಗಡದ ಪ್ರಕಾರ ಕರ್ಮಗಳನ್ನು ಮಾಡಿದರೆ ಅದೇ ಸಾಕು ಎಂದು ಅವರು ಹೇಳುತ್ತಾರೆ. ಮುಸ್ಲಿಂ ಮತಪಂಡಿತರ ಈ ಅಜ್ಞಾನ ಮತ್ತು ಅರಿವುರಾಹಿತ್ಯದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಡೆ ಹೀಗೆ ಹೇಳುತ್ತಾರೆ: ಕೆಲವು ಜನರು **ವಅದಲ್ಲಾಹುಲ್ಲಝೀನ ಆಮನೂ ಮಿನ್‌ಕುಮ್ ವಅಮಿಲುಸ್ಸಾಲಿಹಾತಿ ಲಯಸ್ತಖ್‌ಲಫನ್ನಹುಮ್ ಫಿಲ್ ಅರ್‌ಝಿ ಕಮಾಸ್ತಖ್‌ಲಫಲ್ಲದೀನ ಮಿನ್ ಖಬ್‌ಲಿಹಿಮ್** ಎಂಬ ವಚನದ ಸಾರ್ವತ್ರಿಕತೆಯನ್ನು ನಿರಾಕರಿಸುತ್ತಾರೆ. ಅವರು ಹೇಳುತ್ತಾರೆ, ಮಿನ್‌ಕುಮ್ (ನಿಮ್ಮ ಪೈಕಿ) ಎಂದು ಹೇಳಿದುದು ಸಹಾಬರನ್ನು ಉದ್ದೇಶಿಸಿ ಆಗಿದೆ. ಖಿಲಾಫತೆ ರಾಶಿದ ಅವರ ಕಾಲದಲ್ಲಿಯೇ ಕೊನೆಗೊಂಡಿತು. ಇನ್ನು ಮುಂದೆ ಖಿಯಾಮತ್ ತನಕ ಇಸ್ಲಾಮ್‌ನಲ್ಲಿ ಖಿಲಾಫತ್ ಎಂದೂ ಸ್ಥಾಪಿತವಾಗದು ಎಂದು ಹೇಳುತ್ತಾರೆ. ಆ ಖಿಲಾಫತ್ ಕೇವಲ ಮೂವತ್ತು ವರ್ಷ ಕಾಲದ್ದಾಗಿತ್ತು. ಅನಂತರ ಇಸ್ಲಾಮ್ ಎಂದೂ ಕೊನೆಗೊಳ್ಳದ ದುರದೃಷ್ಟ ಸ್ಥಿತಿಯಲ್ಲಿ ಬಿದ್ದಿತು (ನಊಝುಬಿಲ್ಲಾಹ್). ಇಂತಹ ಮಾತುಗಳನ್ನು ಆಲಿಸಿ ನಮ್ಮ ಶರೀರ ನಡುಗುತ್ತದೆ. ಅಂದರೆ ಇಸ್ಲಾಮಿನ ಅನುಗ್ರಹಗಳು ಮುಂದೆ ದೊರೆಯಲಾರವು, ಅವು ಕೊನೆಗೊಂಡು ಎಷ್ಟೋ ಕಾಲವಾಗಿದೆ ಎಂದು ಅವರು ಹೇಳುವ ಮಾತಿನ ಅರ್ಥವಾಗಿದೆ.

ಮತ್ತೆ ಕೆಲವರು ತಮ್ಮ ಅಧಿಕಾರದ ಬಲದಿಂದ ಖಿಲಾಫತನ್ನು ಸ್ಥಾಪಿಸಲು ಇಚ್ಛಿಸುತ್ತಿದ್ದಾರೆ. ಅವರು ಯೋಚಿಸುವುದೇನೆಂದರೆ ಖಿಲಾಫತ್ ಯಾವುದಾದರೂ ಶಕ್ತಿ ಸಾಮರ್ಥ್ಯದ ಮೂಲಕ ಸ್ಥಾಪಿಸಲ್ಪಡುವುದೆಂದು. ಈ ಜನರು ಅಲ್ಲಾಹನ ಸ್ಪಷ್ಟವಾದ ಸಂದೇಶವನ್ನು ಎಂದರೆ ಸತ್ಯವಿಶ್ವಾಸ ಮತ್ತು ಸತ್ಕರ್ಮದ ಶರತ್ತಿಗೆ ಈ ವಾಗ್ದಾನ ಅಧೀನವಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಂಡಿಲ್ಲ. ಅಲ್ಲಾಹನ ವಾಸ್ತವಿಕ ಆರಾಧಕರಿಗೆ ಈ ವಾಗ್ದಾನ ನೀಡಲಾಗಿದೆ.

ಮುಸ್ಲಿಮರ ತಪ್ಪುಗ್ರಹಿಕೆಗಳ ಕಾರಣದಿಂದ ಇಸ್ಲಾಮ್ ವಿರೋಧಿ ಶಕ್ತಿಗಳು ಇಸ್ಲಾಮೀ ಲೋಕವನ್ನು ಬಲಹೀನಗೊಳಿಸಲು ಎಂತಹ ಸಂಘಟನೆಗಳನ್ನು ಸ್ಥಾಪಿಸಿದರು ಎಂದರೆ, ಆ ಸಂಘಟನೆಗಳು ಖಿಲಾಫತ್ ಹೆಸರಲ್ಲಿ ತಮ್ಮನ್ನು ಸಂಘಟಿಸಿದರು. ಆದರೆ ಸ್ವಲ್ಪಕಾಲ ಲೌಕಿಕ ಉದ್ದೇಶ ಲಕ್ಷ್ಯಗಳನ್ನು ಗಳಿಸಿದ ನಂತರ ತಮ್ಮ ಲೌಕಿಕ ಯಜಮಾನರಿಂದ ಸಹಾಯ ದೊರಕದ ಕಾರಣ ಅಥವಾ ಅವರ ಉದ್ದೇಶಲಕ್ಷ್ಯ ಈಡೇರಿದ ಕಾರಣ ಈಗ ಅದು ಕೊನೆಗೊಳ್ಳುತ್ತಿವೆ. ಮೂರು ವರ್ಷದ ಹಿಂದೆ ಐಯರ್‌ಲೇಂಡಿನಲ್ಲಿ ಒಬ್ಬ ಜರ್ನಲಿಸ್ಟ್ ನನ್ನೊಂದಿಗೆ ಕೇಳಿದರು: ಇಸ್ಲಾಮೀ ಲೋಕದಲ್ಲಿ ಈಗ ರೂಪುಗೊಂಡಿರುವ ಖಿಲಾಫತ್– ಅದರ ವಾಸ್ತವಿಕತೆ ಏನು? ನಾನು ಹೀಗೆ ಉತ್ತರ ನೀಡಿದೆ: ಇದು ಖಿಲಾಫತ್ ಅಲ್ಲ. ಹಿಂದೆ ಕಾರ್ಯನಿರತರಾಗಿದ್ದ ಭಯೋತ್ಪಾದಕರ ಗುಂಪಿನ ಹಾಗೆಯೇ ಇದು ಸಹ ಇನ್ನೊಂದು ಭಯೋತ್ಪಾದಕರ

ಗುಂಪಾಗಿದೆ. ಇತರ ಭಯೋತ್ಪಾದಕ ಗುಂಪುಗಳು ಎಂತಹ ಅಂತಿಮಗತಿ ಪಡೆಯುತ್ತಿವೆಯೋ ಅಂತಹದೇ ಅಂತಿಮ ಗತಿ ಈ ಭಯೋತ್ಪಾದಕರ ಗುಂಪಿಗೂ ಸಂಭವಿಸಲಿದೆ. ಅವರ ಲೌಕಿಕ ಯಜಮಾನರು ಅವರೊಂದಿಗೆ ಸ್ನೇಹ ಸಂಬಂಧ ಹೊಂದಿರುವ ತನಕ ಅವರು ಕಾರ್ಯನಿರತರಾಗುವರು. ಅವರ ಯಜಮಾನರು ಸಹಾಯ ಹಸ್ತವನ್ನು ಹಿಂದೆ ಸರಿಸಿದಾಗ ಈ ಗುಂಪು ಕ್ರಮೇಣ ಬಲಹೀನವಾಗುತ್ತಾ ಹೋಗುವುದು. ಇಸ್ಲಾಮೀ ವಿರೋಧಿ ಶಕ್ತಿಗಳಿಗೆ ಇಸ್ಲಾಮೀ ಲೋಕವನ್ನು ಬಲಹೀನಗೊಳಿಸಬೇಕೆಂಬ ಒಂದು ಕಾರ್ಯಸೂಚಿ ಪದ್ಧತಿ ಇತ್ತು. ಅದನ್ನು ಅವರು ಪೂರ್ಣವಾಗಿ ಈಡೇರಿಸಿದರು. ಈ ಕೆಲಸದಲ್ಲಿ ಮುಸ್ಲಿಮ್ ದೇಶಗಳ ಆಡಳಿತಾಧಿಕಾರಿಗಳೂ ಸೇರಿದ್ದಾರೆ. ಅವರು ತಮ್ಮ ಅಧಿಕಾರದ ಕುರ್ಚಿಯನ್ನು ರಕ್ಷಿಸಲು ತಮ್ಮ ದೇಶದ ಜನರನ್ನು ಕೊಂದರು. ಈಗ ಸಹ ಶಾಂತಿಗೆ ಬದಲಾಗಿ ಮುಸ್ಲಿಮನೇ ಮುಸ್ಲಿಮನಿಗೆ ಭಯಕ್ಕೆ ಕಾರಣವಾಗಿದ್ದಾನೆ. ಮುಸ್ಲಿಮೇತರ ಲೋಕದ ಶಾಂತಿಯನ್ನು ಸಹ ಈ ಜನರು ನಾಶ ಮಾಡುತ್ತಿದ್ದಾರೆ. ಅದಕ್ಕೆ ಕಾರಣ ಏನೇ ಇರಲಿ. ಆದರೆ ಲೋಕದಲ್ಲಿ ನಿರಪರಾಧಿ ಜನರ ಹತ್ಯೆ ಮತ್ತು ಧ್ವಂಸ ಕಾರ್ಯಗಳಲ್ಲಿ ಮುಸ್ಲಿಮನೊಬ್ಬನ ಕೈವಾಡವಿದೆ ಎಂದು ತಿಳಿಯುವಾಗ ದುಃಖಭರಿತ ಮುಸ್ಲಿಮನ ಹೃದಯ ಬಡಿಯುತ್ತದೆ ಮತ್ತು ಅಸ್ವಸ್ಥತೆ ತಲೆದೋರುತ್ತದೆ.

ಕೆಲವು ದಿನಗಳ ಹಿಂದೆ ಯು.ಕೆ.ಯಲ್ಲಿ ಮಾಂಚೆಸ್ಟರ್‌ನಲ್ಲಿ ನಡೆದ ಘಟನೆಯಲ್ಲಿ ನಿಷ್ಕಾರಣವಾಗಿ 22–23 ಜನರು ಕೊಲ್ಲಲ್ಪಟ್ಟರು. ಕೊಲ್ಲಲ್ಪಟ್ಟವರಲ್ಲಿ ನಿಷ್ಕಳಂಕ ಮಕ್ಕಳು ಸೇರಿದ್ದರು. ಇದು ಅತ್ಯಂತ ದೌರ್ಜನ್ಯಭರಿತ ಕೃತ್ಯವಾಗಿದೆ. ಈ ಕೃತ್ಯವನ್ನು ಇಸ್ಲಾಮಿನ ಕಡೆಗೆ ಸಂಬಂಧಿಸಿ ಹೇಳಲು ಸಾಧ್ಯವೇ ಇಲ್ಲ. ಇಂತಹ ದೌರ್ಜನ್ಯ ಕೃತ್ಯಗಳನ್ನು ಕಾಣುವಾಗ ನಾವು ಆತಂಕ ಭರಿತರಾಗುತ್ತೇವೆ. ಅಲ್ಲಾಹನು ಮೃತರಾದವರ ಮೇಲೆ ದಯೆದೋರಲಿ ಮತ್ತು ಅವರ ಸಂಬಂಧಿಕರಿಗೆ ಸಹನೆಯನ್ನು ದಯಪಾಲಿಸಲಿ. ಇಸ್ಲಾಮಿನ ಹೆಸರಲ್ಲಿ ಮತ್ತು ಖಿಲಾಫತ್ ಹೆಸರಲ್ಲಿ ಇಂತಹ ಕೃತ್ಯಗಳನ್ನು ಮಾಡುವ ದೌರ್ಜನ್ಯಗಾರರ ಕೈಗಳನ್ನು ಅಲ್ಲಾಹನು ತಡೆಯಲಿ.

ಇದೇ ರೀತಿ ಮುಸ್ಲಿಮ್ ದೇಶಗಳಲ್ಲಿ ನಡೆಯುತ್ತಿರುವ ಹತ್ಯೆ, ನಾಶ, ದೌರ್ಜನ್ಯ ಮತ್ತು ಬರ್ಬರ ಕೃತ್ಯಗಳಿಗೆ ಕಾರಣ ಜನರು ಧರ್ಮದಿಂದ ದೂರಸರಿದು ಹೋದುದು ಮತ್ತು ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತರದೆ ಇದ್ದುದರ ಪರಿಣಾಮವಾಗಿದೆ. ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿ ನಡೆಸಲಾಗುವ ಈ ಕೃತ್ಯಗಳ ಕಾರಣ, ಇಸ್ಲಾಮಿನ ಹೆಸರಲ್ಲಿ ಮಾಡಲಾಗುವ ದೌರ್ಜನ್ಯಗಳ ಕಾರಣ, ಮುಸ್ಲಿಮ್ ದೇಶಗಳ ಸರಕಾರ ಅನ್ಯ ದೇಶಗಳ ಸರಕಾರದಿಂದ ಸಹಾಯ ಪಡೆದು ಮುಸ್ಲಿಮರ ಮೇಲೆ ನಡೆಸುವ ಬಾಂಬ್ ದಾಳಿಗಳ ಕಾರಣದಿಂದ, ಅಹ್ಮದಿಯರಾದ ನಾವು ಅತ್ಯಂತ ಹೆಚ್ಚು ನೋವು ಅನುಭವಿಸುತ್ತಿದ್ದೇವೆ. ಏಕೆಂದರೆ ನಾವು ಇಸ್ಲಾಮಿನ ತತ್ವಗಳೇನೆಂದು ತಿಳಿದುಕೊಂಡಿದ್ದೇವೆ. ನಾವು ಇಸ್ಲಾಮಿನ ಪ್ರೀತಿ ಮತ್ತು ಶಾಂತಿಯ ಉಪದೇಶಗಳನ್ನು ಅರಿತುಕೊಂಡವರಾಗಿದ್ದೇವೆ. ನಾವು ಖಿಲಾಫತ್ ಮೂಲಕ ಭಯವನ್ನು ನಿವಾರಿಸಿ ಶಾಂತಿಯನ್ನು ಗಳಿಸುವ ದೃಶ್ಯಗಳನ್ನು ಕಂಡವರಾಗಿದ್ದೇವೆ.

ಖಿಲಾಫತ್ ಲೌಕಿಕ ಶಕ್ತಿಯಿಂದ ಗಳಿಸಲು ಸಾಧ್ಯವಿಲ್ಲ. ಲೌಕಿಕ ಕುತಂತ್ರಗಳ ಮೂಲಕ ಸಹ ಖಿಲಾಫತ್ ಗಳಿಸಲು ಸಾಧ್ಯವಿಲ್ಲ. ಮುಸ್ಲಿಮ್ ಮತಪಂಡಿತರೆಂಬ ನಾಮಧೇಯರು ಜಮಾಯಿಸಿ ಠರಾವು ಅಂಗೀಕರಿಸಿ, ಖಿಲಾಫತ್ ಸ್ಥಾಪಿಸಲು ಸಾಧ್ಯವಿಲ್ಲ. ಕೆಲವು ವರ್ಷಗಳ ಹಿಂದೆ ಈ ಪ್ರಯತ್ನ ಸಹ ಮಾಡಲಾಗಿತ್ತು. ಮುಸ್ಲಿಮರು ಜಮಾಯಿಸಿ ಒಬ್ಬ ಖಲೀಫರನ್ನು ಚುನಾಯಿಸುವ ಪ್ರಯತ್ನ ಮಾಡಲಾಗಿತ್ತು. ಈ ರೀತಿ ಖಿಲಾಫತ್ ಸ್ಥಾಪಿತವಾಗಲಾರದು. ಖಿಲಾಫತ್ ಎಂಬುದು ಭಯವನ್ನು ನಿವಾರಿಸಿ ಶಾಂತಿಯನ್ನು ಸ್ಥಾಪಿಸುವ ವ್ಯವಸ್ಥೆಯಾಗಿದೆ. ಅದು ಅಲ್ಲಾಹನು ಮತ್ತು ಅವನ ಸಂದೇಶವಾಹಕರು ಹೇಳಿದ ರೀತಿಯಲ್ಲಿಯೇ ಜಾರಿಗೊಳ್ಳುವುದು. ಅಲ್ಲಾಹನು ಪವಿತ್ರ ಖುರ್‌ಆನ್‌ಲ್ಲಿ ಇದಕ್ಕೆ ಸಂಬಂಧಿಸಿ ಹೇಳಿರುವುದು: **ವಆಖರೀನ ಮಿನ್‌ಹುಮ್ ಲಮ್ಮಾ ಯಲ್‌ಹಖೂ ಬಿಹಿಮ್.** ಅವರೊಂದಿಗೆ ಇಷ್ಟರವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ. (62:4). ಪವಿತ್ರ ಖುರ್‌ಆನಿನ ಈ ವಚನ ಅವತೀರ್ಣವಾದಾಗ ಒಬ್ಬ ಸಹಾಬಿ ಹಝ್ರತ್ ಮುಹಮ್ಮದ್ ಸಲ್ಲಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಿದರು: ಓ ಅಲ್ಲಾಹನ ಸಂದೇಶವಾಹಕರೇ, ಇವರೊಂದಿಗೆ ಇಷ್ಟರ ತನಕ ಸೇರಿರದ ಸಹಾಬರ ಪದವಿ ಗಳಿಸಿದ ಆ ಜನರು ಯಾರು? ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಲ್ಮಾನ್ ಫಾರಿಸೀ ಎಂಬ ಸಹಾಬಿಯ ಭುಜದ ಮೇಲೆ ಕೈ ಇರಿಸಿ ಹೇಳಿದರು: ಸತ್ಯವಿಶ್ವಾಸ **ಸುರಯ್ಯಾ**ವನ್ನು ತಲಪಿದರೂ ಇವರ ವಂಶದ ಜನರಲ್ಲಿ ಕೆಲವರು ಅದನ್ನು ಮರಳಿ ತರುವರು. ಆಖರೀನ್ ಜನರ ಸ್ಥಾನದ ಬಗ್ಗೆ ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನನ್ನ ಅನುಯಾಯಿಗಳ ಸಮೂಹ ಅನುಗ್ರಹಭರಿತ ಸಮೂಹವಾಗಿದೆ. ಇದರ ಪ್ರಥಮ ಕಾಲಘಟ್ಟ ಉತ್ತಮವೋ ಕೊನೆಯ ಕಾಲಘಟ್ಟ ಉತ್ತಮವೋ ಎಂದು ನನಗೆ ತಿಳಿಯದು. ಆದುದರಿಂದ ಕೊನೆಯ ಕಾಲಘಟ್ಟವು ಉತ್ತಮವಾಗಿರುವ ಬಗ್ಗೆ ಶುಭವಾರ್ತೆಯನ್ನು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ್ದಾರೆ. ಈಗ ಸತ್ಯವಿಶ್ವಾಸವನ್ನು ಲೋಕದಲ್ಲಿ ಸ್ಥಾಪಿಸುವ ಪ್ರಯತ್ನವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಸಂಧನಾದ ಗುಲಾಮನಿಂದ ಸ್ಥಾಪಿತವಾದ ವ್ಯವಸ್ಥೆಯ ಮೂಲಕ ಹೊರತು ಬೇರೆ ಯಾರು ಮಾಡುತ್ತಿದ್ದಾರೆ? ಶಾಂತಿ, ಪ್ರೀತಿ, ವಾತ್ಸಲ್ಯಗಳ ಮೂಲಕ ಇಸ್ಲಾಮಿನ ಸಂದೇಶವನ್ನು ಆ ವ್ಯವಸ್ಥೆ ಹಬ್ಬಿಸುತ್ತಾ ಇದೆ. ಸತ್ಯ ವಿಶ್ವಾಸವನ್ನು ಪುನಃ ಲೋಕದಲ್ಲಿ ಸ್ಥಾಪಿಸಲು ಪ್ರಯತ್ನ ಮಾಡಲಾಗುತ್ತಿದೆ.

ಈ ಕೆಲಸ ನಾವು ಮಾಡಬೇಕಾಗಿದೆ. ಧರ್ಮದ ಪುನಶ್ಚೇತನ ಮಾಡಲು ಮತ್ತು ಸತ್ಯ ವಿಶ್ವಾಸವನ್ನು ಲೋಕದಲ್ಲಿ ಸ್ಥಾಪಿಸಲು ನಾವು ಈ ಕಾಲಘಟ್ಟದಲ್ಲಿ ವಾಗ್ದತ್ತ ಮಸೀಹ್ ವಾಗ್ದತ್ತ ಮಹ್‌ದಿಯವರ ಜೊತೆ ಸೇರಬೇಕಾಗಿದೆ. ಅವರು ಖಾತಮುಲ್ ಖುಲಫಾ ಸಹ ಆಗಿದ್ದಾರೆ. ಆಖರೀನ್ ಜನರು ಅವ್ವಲೀನ್(ಮೊದಲಿನ ಕಾಲದ) ಜನರ ಪದವಿ ಗಳಿಸಿ ಅವರೊಂದಿಗೆ ಸೇರುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಈ ಪವಿತ್ರ

ಖುರ್‌ಆನ್ ವಚನದ ಸಾರಾಂಶವೇನೆಂದರೆ ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎಂತಹ ಕಾಲದಲ್ಲಿ ಕಳುಹಿಸಿದನೆಂದರೆ ಆಗ ಜನರು ವಿದ್ಯೆ ಮತ್ತು ಜ್ಞಾನದ ಬಗ್ಗೆ ತಿಳುವಳಿಕೆ ಇಲ್ಲದವರಾಗಿದ್ದರು. ಅವರ ಆತ್ಮ ಪರಿಪೂರ್ಣತೆ ಗಳಿಸಲು ಸಹಾಯಕವಾದ ಜ್ಞಾನ ಅವರಿಗಿರಲಿಲ್ಲ. ಜನರೆಲ್ಲರೂ ಪಥಭ್ರಷ್ಟರಾಗಿದ್ದರು. ಅಂತಹ ಸಂದರ್ಭದಲ್ಲಿ ಅಲ್ಲಾಹನು ತನ್ನ ಸಂದೇಶವಾಹಕರನ್ನು ಕಳುಹಿಸಿದನು. ಆ ಸಂದೇಶವಾಹಕರು ಜನರ ಆತ್ಮಗಳನ್ನು ಪರಿಶುದ್ಧಿಗೊಳಿಸಿದರು. ಅವರಿಗೆ ಗ್ರಂಥದ ಜ್ಞಾನ ಮತ್ತು ಜಾಣ್ಮೆ ನೀಡಿದರು. ಅವರ ಹೃದಯಗಳನ್ನು ಬೆಳಗಿಸಿದರು.

ಇನ್ನೊಂದು ಗುಂಪಿನ ಜನರು ಲೋಕದ ಕೊನೆಯ ಕಾಲದಲ್ಲಿರುವರು. ಅವರು ಸಹ ಅಂಧಕಾರದಲ್ಲಿಯೂ ಪಥಭ್ರಷ್ಟತೆಯಲ್ಲಿಯೂ ಇರುವರು. ಅವರು ಜ್ಞಾನ ಜಾಣ್ಮೆ ಮತ್ತು ದೃಢವಿಶ್ವಾಸ ರಹಿತರಾಗುವರು. ಆಗ ಅಂತಹ ಜನರನ್ನು ಅಲ್ಲಾಹನು ಸಹಾಬರ ಗುಣಸಂಪನ್ನರನ್ನಾಗಿ ಮಾಡುವನು. ಎಂದರೆ ಸಹಾಬರು ಏನನ್ನು ಕಂಡರೋ ಅವು ಅವರಿಗೂ ತೋರಿಸಲ್ಪಡುವುದು. ಅವರ ಸತ್ಯ ಮತ್ತು ದೃಢ ವಿಶ್ವಾಸ ಸಹಾಬರ ಸತ್ಯ ಮತ್ತು ದೃಢವಿಶ್ವಾಸದ ಹಾಗೆ ಆಗುವುದು. ಅದರಂತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆಗಮಿಸಿ ಇಸ್ಲಾಮನ್ನು ಪುನಶ್ಚೇತನಗೊಳಿಸಿದರು. ಅವರ ಶಿಷ್ಯರು ಅವರೊಂದಿಗೆ ಜೋಡಿಸಿಕೊಂಡು ಧರ್ಮದ ಪ್ರಕಾಶ ಗಳಿಸಿದವರಾದರು. ಅವರು ವಿವಿಧ ದೃಷ್ಟಾಂತಗಳನ್ನು ಕಂಡರು. ಇಂದು ಸಹ ಅನೇಕರು ಅಂಧಕಾರದಿಂದ ಹೊರಗೆ ಬಂದು ಪ್ರಕಾಶವನ್ನು ಕಾಣುತ್ತಾ ಇದ್ದಾರೆ. ದೃಷ್ಟಾಂತಗಳನ್ನು ಕಾಣುತ್ತಿದ್ದಾರೆ ಮತ್ತು ಅಹ್ಮದಿಯಾ ಜಮಾಅತಿಗೆ ಸೇರುತ್ತಿದ್ದಾರೆ.

ಅಲ್‌ಜೀರಿಯಾದ ಉದಾಹರಣೆಯನ್ನೇ ನೋಡಿರಿ. ಅದು ಹಳೆಯ ಜಮಾಅತೇನೂ ಅಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ ಆಖರೀನ್‌ಗಳಲ್ಲಿ ಸೇರಿದ ನಂತರ ಖಿಲಾಫತನ್ನು ಅನುಸರಿಸಿ ಅವರ ವಿಶ್ವಾಸ ಅಲ್ಲಾಹನ ಅನುಗ್ರಹದಿಂದ ಉನ್ನತಿಯನ್ನು ಸ್ಪರ್ಶಿಸುತ್ತಿದೆ. ಅವರ ಪೈಕಿ ಸೆರೆಮನೆವಾಸ ಅನುಭವಿಸುವವರ ವಿಶ್ವಾಸದ ದೃಢತೆಯ ಅಂದಾಜು ನನಗೆ ನಿನ್ನೆ ಲಭಿಸಿದ ಒಬ್ಬ ಸೆರೆಯಾಳುವಿನ ಪತ್ರದಿಂದ ಸ್ಪಷ್ಟವಾಗುತ್ತದೆ. ಅವರು ಬರೆಯುತ್ತಾರೆ: ನಮಗೆ ನೈಜ ಇಸ್ಲಾಮಿನ ಅನುಗ್ರಹ ನೀಡಿದುದಕ್ಕೆ ನಾವು ಅಲ್ಲಾಹನಿಗೆ ಲಕ್ಷ ಲಕ್ಷ ಬಾರಿ ಕೃತಜ್ಞರಾಗಿದ್ದೇವೆ. ಅದು ನಮ್ಮ ಹೃದಯಗಳನ್ನು ಜೀವಂತಗೊಳಿಸಿತು. ಬುನ್‌ಯನುನ್ ಮರ್‌ಸೂಸ್ ಆಗಿ ಮಾಡಿತು. ಅಲ್ಲಾಹನ ಸಂಪ್ರೀತಿ ಗಳಿಸಲು ಒಬ್ಬರಿನ್ನೊಬ್ಬರನ್ನು ಪ್ರೀತಿಸುವಂತೆ ಮಾಡಿತು. ಈ ಕಾಲದ ಖಲೀಫರ ಕೈಗಳಲ್ಲಿ ನಮ್ಮನ್ನು ಒಗ್ಗೂಡಿಸಿತು. (ಅವರು ನನ್ನನ್ನು ಸಂಬೋಧಿಸಿ ಹೀಗೆ ಬರೆದಿದ್ದಾರೆ:) ಸಯ್ಯಿದೀ ವ ಮೌಲಾ, ನಾನು ಸೆರೆಮನೆಯನ್ನು ಪ್ರವೇಶಿಸಿದ ನಂತರ ದೇಶದ ಎಲ್ಲ ಭಾಗದಿಂದ ಅಹ್ಮದಿಯರು ಬಂದು ನನ್ನನ್ನು ಕಾಣುತ್ತಿದ್ದಾರೆ. ಅಲ್ಲಾಹನ ವಿಶಿಷ್ಟ ಸಹಾಯಗಳ ಕಾರಣ ಸಂತೋಷಭರಿತರಾಗಿದ್ದಾರೆ. ಸೆರೆಮನೆವಾಸ ಅನುಭವಿಸುತ್ತಿದ್ದರೂ ಅಲ್ಲಾಹನು ಅನುಗ್ರಹ ನೀಡುತ್ತಿರುವುದರಿಂದ ಸಂತೋಷದಿಂದಲೂ ಇದ್ದಾರೆ. ಸತ್ಯವನ್ನು ಹರಡಲು ಕೆಲಸ ಮಾಡಬೇಕೆಂದೂ ಪ್ರಾರ್ಥಿಸಬೇಕೆಂದೂ ಆಶಿಸುತ್ತಿದ್ದಾರೆ. ನಮ್ಮ ಮೇಲೆ ಎಷ್ಟು ಕಷ್ಟ ಬಂದರೂ ಸತ್ಯವನ್ನು ಪ್ರಚಾರ ಮಾಡುವ ಕೆಲಸ ಮುಂದುವರಿಸುವೆವು. ನಾವು ಅಲ್ಲಾಹನೊಂದಿಗೆ ಪ್ರಾರ್ಥಿಸಿ ಸಹಾಯ ಬೇಡಿಕೊಳ್ಳುವೆವು. ಈ ಕಷ್ಟಕಾಲದಲ್ಲಿ ನಿಮ್ಮ ಪ್ರಾರ್ಥನೆಗಳು ಅಂಗೀಕಾರಗೊಂಡ ದೃಶ್ಯಗಳನ್ನು ನಾವು ಕಣ್ಣಾರೆ ಕಂಡೆವು. ಅಲ್ಲಾಹನ ಅನುಗ್ರಹಗಳು ಅಲ್‌ಜೀರಿಯಾದ ಬಲಹೀನ ಅಹ್ಮದಿಯರ ಮೇಲೆ ಇಳಿಯುತ್ತಿವೆ.

ಅಲ್ಲಿ ಕೆಲವರು ಸೆರೆಮನೆ ಬಂಧನದಿಂದ ಮುಕ್ತರಾಗಿ ಹೊರಗೆ ಬಂದಿದ್ದಾರೆ. ಬಂಧಿತರಾಗಿರುವ ಎಲ್ಲರನ್ನೂ ಅಲ್ಲಾಹನು ಬೇಗನೇ ಬಂಧನಮುಕ್ತರನ್ನಾಗಿ ಮಾಡಲಿ.

ಇನ್ನೊಬ್ಬ ಅಸೀರ್ ಬರೆಯುತ್ತಾರೆ: ಅಲ್ಲಾಹನು ಒಂದು ವಿಶಿಷ್ಟ ಉದ್ದೇಶಕ್ಕಾಗಿ ನಮ್ಮನ್ನು ಬಂಧಿತರನ್ನಾಗಿ ಮಾಡಿರುವನು ಎಂದು ನಮಗೆ ಬಂಧನ ಕಾಲದಲ್ಲಿ ತಿಳಿಯಿತು. ಅಲ್ಲಾಹನು ತನ್ನ ಅದ್ಭುತಗಳಲ್ಲಿ ಕೆಲವನ್ನು ಪ್ರಕಟಿಸಿದನು. ನಾವು ಸ್ವತಂತ್ರರಾಗಿದ್ದಾಗ ನಮಗೆ ದೊರೆತ ಜಯಗಳ ಮೂಲಕ ನಾವು ಅಲ್ಲಾಹನ ವದನವನ್ನು ನೋಡಿದೆವು ಮತ್ತು ಅವನ ಮಾರ್ಗದ ಬಗ್ಗೆ ತಿಳಿದೆವು ಎಂದು ಭಾವಿಸಿದ್ದೆವು. ಆದರೆ ಈಗ ತಿಳಿಯಿತು ನಾವು ನೋಡಿದುದು ಬಹಳ ಕಮ್ಮಿ ಎಂದು. ಈಗ ನಾವು ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಯಥಾರ್ಥ ಉದಾಹರಣೆಗಳನ್ನು ಕಂಡೆವು.

ನನ್ನನ್ನು ಸಂಬೋಧಿಸಿ ಬರೆದಿದ್ದಾರೆ: ತಮ್ಮನ್ನು ಸ್ವಪ್ನಗಳಲ್ಲಿ ಬೇಟಿಯಾಗಿರುವೆ. ನಿಮ್ಮ ಪ್ರಾರ್ಥನೆಗಳು ನಮ್ಮ ವಿಶ್ವಾಸವನ್ನು ವರ್ಧಿಸಿದುವು. ಸೆರೆಮನೆವಾಸದ ಕಾಲದಲ್ಲಿ ನಮಗೆ ಅದು ನೆಮ್ಮದಿ ನೀಡಿತ್ತು. ನಾವು ಬಿಡುಗಡೆ ಹೊಂದಿದುದು ನಿಮ್ಮ ಮತ್ತು ಜಮಾಅತಿನವರ ಪ್ರಾರ್ಥನೆಯ ಕಾರಣದಿಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಜಾರಿಗೊಳಿಸಿದ ಖಿಲಾಫತ್ ಮೂಲಕ ನಮಗೆ ನೆಮ್ಮದಿ ದೊರಕುತ್ತಲಿದೆ ಎಂದು ಬರೆದಿದ್ದಾರೆ. ವಿರೋಧಿಗಳು ಭಯವನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾಗ ಅಲ್ಲಾಹನ ಅನುಗ್ರಹದಿಂದ ಖಿಲಾಫತ್‌ನೊಂದಿಗೆ ಸಂಬಂಧ ಹೊಂದಿದ ಕಾರಣ ಅಲ್ಲಾಹನು ಅವರಿಗೆ ನೆಮ್ಮದಿ ದೊರಕುವಂತೆ ಮಾಡುತ್ತಿದ್ದನು.

ಅಲ್‌ಜೀರಿಯಾದ ಜಮಾಅತ್ ಚಿಕ್ಕದಾಗಿದೆ. ಅದು ಪರೀಕ್ಷೆಯ ಈ ಕಾಲದಲ್ಲಿ ಬಹಳ ಸ್ಥಿರಚಿತ್ತತೆಯಿಂದ ಇದೆ. ಅವರ ಭಾವನೆಗಳು ನಾನು ವಿವರಿಸಿದ ಎರಡು ಪತ್ರಗಳಿಂದ ತಿಳಿಯುತ್ತವೆ. ಅಲ್‌ಜೀರಿಯಾದ ಅಹ್ಮದಿಯರಲ್ಲಿ ಕೆಲವರ ಹೊರತು ಯಾರೂ ಖಲೀಫರನ್ನು ಭೇಟಿಯಾಗಿಲ್ಲ. ಆದರೆ ಅವರ ವಿಶ್ವಾಸ ದೃಢವಾಗಿರುವ ಕಾರಣ ಅಲ್ಲಾಹನು ಅವರಿಗೆ ನೆಮ್ಮದಿ ನೀಡುತ್ತಿದ್ದಾನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಅವರಿಗೆ ಸಮೀಪವಾಗಿದ್ದ ಜನರಿಗೆ ದೊರಕುತ್ತಿದ್ದ ನೆಮ್ಮದಿಯ ಹಾಗೆ ಇದು ಇದೆ.

ಹೀಗೆಲ್ಲಾ ಆಗುವುದು ಏಕೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಅಲ್ಲಾಹನು ವಾಗ್ದಾನ ಮಾಡಿದ್ದನು, ಅವರ ನಂತರ **ಖುದ್‌ರತೆ ಸಾನಿಯ** ಎಂದರೆ ಖಿಲಾಫತ್ ಮೂಲಕ ಅವರ ಕೆಲಸ ಪೂರ್ಣಗೊಳಿಸುವನು ಎಂದು. ಇಸ್ಲಾಮಿಗೆ ಪುನಃ ಜಯಲಭಿಸುವಂತೆ ಮಾಡುವನು

ಎಂದು. ಅವರನ್ನು ನಂಬುವವರಿಗೆ ನೆಮ್ಮದಿ ನೀಡುವನು ಎಂದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ನಿಧನದ ನಂತರ ಖಿಲಾಫತ್ ಮೂಲಕ ಜಮಅತಿನ ಅಭಿವೃದ್ಧಿ ಜಾರಿಯಲ್ಲಿರುವ ಬಗ್ಗೆ ಅಲ್‌ವಸಿಯ್ಯತ್ ಎಂಬ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ:

ಪ್ರಿಯರೇ, ಪುರಾತನ ಕಾಲದಿಂದಲೂ ಅಲ್ಲಾಹನ ನಡೆವಳಿಕೆ ಹೀಗೆ ಇದೆ. ಅವನು ಎರಡು ದಿವ್ಯಶಕ್ತಿಗಳನ್ನು ಪ್ರಕಟಿಸುತ್ತಾನೆ ಮತ್ತು ಶತ್ರುಗಳ ಎರಡು ಮಿಥ್ಯ ಸಂತೋಷಗಳನ್ನು ನಿರರ್ಥಕ ಎಂದು ತೋರಿಸಿ ಕೊಡುತ್ತಾನೆ. ಅಲ್ಲಾಹನು ತನ್ನ ಪುರಾತನವಾದ ನಡೆವಳಿಕೆಯನ್ನು ಬಿಟ್ಟು ಬಿಡುವುದು ಸಂಭಾವ್ಯವಲ್ಲ. ಆದುದರಿಂದ ನಾನು ನಿಮ್ಮೊಂದಿಗೆ ಹೇಳಿದ ಮಾತಿನಿಂದ ದುಃಖಿತರಾಗಬೇಡಿರಿ. ನಿಮ್ಮ ಹೃದಯಗಳು ಗಾಬರಿಗೊಳ್ಳದಿರಲಿ. ಏಕೆಂದರೆ ಅಲ್ಲಾಹನ ದಿವ್ಯ ಶಕ್ತಿಯ ಎರಡನೆಯ ಪ್ರಕಟಣೆಯನ್ನು ನೀವು ನೋಡುವುದು ಆವಶ್ಯಕವಾಗಿದೆ. ಅದು ಆಗಮಿಸುವುದು ನಿಮಗೆ ಉತ್ತಮವಾಗಿದೆ. ಅದು ಶಾಶ್ವತವಾಗಿದೆ. ಅದರ ಸರಪಳಿ ಪುನರುತ್ಥಾನದ ದಿನದ ತನಕ ಕಡಿದು ಹೋಗಲಾರದು. ನಾನು ನಿಮ್ಮ ಬಳಿಯಿಂದ ನಿರ್ಗಮಿಸದೆ ಆ ದ್ವಿತೀಯ ಶಕ್ತಿ ಆಗಮಿಸಲಾರದು. ಆದರೆ ನಾನು ನಿಮ್ಮನ್ನು ಬಿಟ್ಟು ಹೋಗುವಾಗ ಅಲ್ಲಾಹನು ತನ್ನ ದ್ವಿತೀಯ ಶಕ್ತಿಯನ್ನು ನಿಮಗಾಗಿ ಕಳುಹಿಸಿ ಕೊಡುವನು. "ಬರಾಹೀನೆ ಅಹ್ಮದಿಯಾ ಎಂಬ ಗ್ರಂಥದಲ್ಲಿ ಅಲ್ಲಾಹನ ವಾಗ್ದಾನ ಉಲ್ಲೇಖಿಸಲಾಗಿದೆ. ಆ ವಾಗ್ದಾನ ಪ್ರಕಾರ ದ್ವಿತೀಯ ದಿವ್ಯಶಕ್ತಿ ಸದಾ ಕಾಲ ನಿಮ್ಮ ಜೊತೆಗಿರುವುದು. ಆ ವಾಗ್ದಾನ ನನ್ನ ಬಗ್ಗೆಯಲ್ಲ. ಅದು ನಿಮ್ಮ ಎಂದರೆ ಜಮಾಅತ್ ಬಗ್ಗೆಯಾಗಿದೆ. ಅಲ್ಲಾಹನು ಹೀಗೆ ಹೇಳಿದ್ದಾನೆ: ನಿನ್ನ ಅನುಯಾಯಿಗಳ ಈ ಜಮಾಅತಿಗೆ ಪುನರುತ್ಥಾನ ದಿನದ ತನಕ ಅನ್ಯರ ಮೇಲೆ ಜಯವನ್ನು ದಯಪಾಲಿಸುವೆನು."

ಕಷ್ಟಗಳು ಬರುವುವು, ಪರೀಕ್ಷೆಗಳು ಸಂಭವಿಸುವುವು. ಆದರೆ ಕೊನೆಯ ಜಯ ಅಹ್ಮದಿಯಾ ಜಮಾಅತಿಗೆ ಲಭಿಸುವುದು– ಇನ್‌ಶಾಅಲ್ಲಾಹ್. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮೂಲಕ ಜಾರಿಗೊಂಡ ಖಿಲಾಫತ್ ವ್ಯವಸ್ಥೆಯೇ ವಾಸ್ತವಿಕ ವ್ಯವಸ್ಥೆಯಾಗಿದೆ. ಅದರೊಂದಿಗೆ ಅಭಿವೃದ್ಧಿಗಳು ಸಂಬಂಧಿಸಿವೆ. ಲೋಕದ ಶಾಂತಿ ಮತ್ತು ಸುರಕ್ಷೆ ಸಹ ಅದರೊಂದಿಗೆ ಸಂಬಂಧಿಸಿದೆ. ಈ ಖಿಲಾಫತ್ ವ್ಯವಸ್ಥೆ ಮೂಲಕವೇ ಇಸ್ಲಾಮ್ ಧರ್ಮದ ಶ್ರೇಷ್ಠತೆ ಮತ್ತು ಜಯ ಲೋಕದಾದ್ಯಂತ ಸಾಬೀತಾಗಲಿದೆ ಮತ್ತು ಸ್ಥಾಪಿತವಾಗಲಿವೆ. ಈ ಜಯದ ಸಮಾಚಾರ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಎರಡು ವಿಧಗಳ ಶಕ್ತಿ ಪ್ರದರ್ಶನ ಮಾಡುತ್ತಾನೆ. ಒಂದು, ಪ್ರವಾದಿಗಳ ಮೂಲಕ ಅಲ್ಲಾಹನು ತನ್ನ ಶಕ್ತಿಯ ಹಸ್ತವನ್ನು ತೋರಿಸುತ್ತಾನೆ. ಎರಡು, ಪ್ರವಾದಿ ಮೃತರಾದ ನಂತರ ಅವರ ಅನುಯಾಯಿಗಳ ಸಮುದಾಯ ವಿವಿಧ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಶತ್ರುಗಳು ತೀವ್ರವಾಗಿ ವಿರೋಧಿಸುತ್ತಾ ಕೆಲಸ ಬಿಗಡಾಯಿಸಿತೆಂದು ಭಾವಿಸುತ್ತಾ ಈ ಜಮಾಅತ್ ನಾಶವಾಗುವುದೆಂದು ದೃಢನಂಬಿಕೆ ಹೊಂದುತ್ತಾರೆ. ಜಮಾಅತಿನ ಒಳಗಿರುವವರು ಸಹ ಸಂಶಯಗಳಿಗೆ ತುತ್ತಾಗಿ ಬಲಗುಂದಿದವರಾಗುತ್ತಾರೆ. ಕೆಲವು ದುರದೃಷ್ಟವಂತರು ಜಮಾಅತನ್ನು ಬಿಟ್ಟು ಹೋಗುತ್ತಾರೆ. ಆಗ ಅಲ್ಲಾಹನು ತನ್ನ ಶಕ್ತಿಯನ್ನು ಎರಡನೆಯ ಸಾರಿ ಬಲಯುತವಾಗಿ ಪ್ರದರ್ಶಿಸುತ್ತಾನೆ. ಕುಸಿದು ಹೋಗುವ ಜಮಾಅತನ್ನು ಅವನು ಹಿಡಿದು ನಿಲ್ಲಿಸುತ್ತಾನೆ. ಯಾರು ಕೊನೆಯ ತನಕ ಸಹನೆ ತೋರುತ್ತಾನೋ ಅವನು ಅಲ್ಲಾಹನ ಈ ಅದ್ಭುತ ದೃಷ್ಟಾಂತವನ್ನು ಕಾಣುತ್ತಾನೆ. ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಕಾಲದಲ್ಲಿ ಹೀಗೆಯೇ ಸಂಭವಿಸಿತು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಿಧನ ಹೊಂದಿದಾಗ ಅಹ್ಮದಿಯಾ ಜಮಾಅತ್‌ಗೆ ಒಂದು ಆಘಾತ ಉಂಟಾದರೂ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಮೂಲಕ ಜಮಾಅತನ್ನು ಅಲ್ಲಾಹನು ಕೂಡಲೆ ರಕ್ಷಿಸಿದುದು ಅವನು ಮಾಡಿದ ಔದಾರ್ಯವಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ನಿಧನ ಹೊಂದಿದಾಗ ಜಮಾಅತ್ ಇನ್ನೊಂದು ಆಘಾತವನ್ನು ಅನುಭವಿಸಿತು. ಅದು ಬಹಳ ತೀವ್ರವಾದ ಆಘಾತವಾಗಿತ್ತು. ಆಗ ಬಹಳ ಕಠಿಣ ಪರಿಸ್ಥಿತಿ ಇತ್ತು. ಅದರ ಬಗ್ಗೆ ದೀರ್ಘವಾಗಿ ವಿವರಿಸಬೇಕಾದೀತು. ಕೊನೆಗೆ ಏನಾಯಿತು. ಖಿಲಾಫತ್ ಜಯಶಾಲಿಯಾಯಿತು. ಅದು ವಿಜಯದ ಮಾರ್ಗದಲ್ಲಿ ಮಜಲುಗಳನ್ನು ದಾಟುತ್ತಾ ಮುಂದೆ ಸಾಗಿತು. ತೃತೀಯ ಖಿಲಾಫತ್ ಕಾಲದಲ್ಲಿ ಕಷ್ಟದ ಅವಸ್ಥೆಗಳು ತಲೆದೋರಿದುವು. ಅಲ್ಲಾಹನು ಅನುಗ್ರಹಿಸಿದನು. ಸರಕಾರದ ಭಯಾನಕ ಯೋಜನೆಗಳಿದ್ದುವು. ಆದರೆ ಜಮಾಅತಿನ ಅಭಿವೃದ್ಧಿಗೆ ಯಾವುದೇ ತಡೆ ಉಂಟಾಗಲಿಲ್ಲ. ಚತುರ್ಥ ಖಿಲಾಫತ್ ಕಾಲದಲ್ಲಿ ಸಹ ಪಾಕಿಸ್ಥಾನದ ಸರಕಾರ ಹೆಚ್ಚು ಕಾಠಿಣ್ಯಭರಿತವಾಗಿ ವರ್ತಿಸಿತು. ಆದರೆ ಆ ಪರೀಕ್ಷೆಯ ಘಟ್ಟದಲ್ಲೂ ಸಮಾದಾನದ ವ್ಯವಸ್ಥೆ ಅಲ್ಲಾಹನು ಮಾಡಿದನು. ಜಮಾಅತ್ ಹೊಸ ಗುರಿಗಳನ್ನು ದಾಟುತ್ತಾ ಹೋಯಿತು. ತಬ್ಲೀಗ್ ಮಾಡಲು ಹೊಸ ಹೊಸ ಮಾರ್ಗಗಳು ತೆರೆಯಲ್ಪಟ್ಟವು. ಸ್ಯಾಟಲೈಟ್ ಮೂಲಕ ಲೋಕವಿಡೀ ತಬ್ಲೀಗ್ ಪ್ರಾರಂಭವಾಯಿತು. ಪಂಚಮ ಖಿಲಾಫತ್ ಕಾಲದಲ್ಲಿಯೂ ತಬ್ಲೀಗ್ ಇನ್ನಷ್ಟು ವಿಶಾಲಗೊಂಡಿತು. ಜಮಾಅತಿನ ಸಂದೇಶ ಸಾವಿರಗಳಿಂದ ಹೊರಟು ಲಕ್ಷಗಳನ್ನು ದಾಟಿ ಕೋಟಿಗಳಿಗೆ ತಲಪಿತು. ಒಂದು ಅಥವಾ ಎರಡು ದೇಶಗಳಲ್ಲಿ ಅಲ್ಲ ಅನೇಕ ದೇಶಗಳಲ್ಲಿ ಈಗ ವಿರೋಧ ಪ್ರಾರಂಭವಾಗಿದೆ. ಇದು ಅಹ್ಮದಿಯ್ಯತ್ತಿನ ಸತ್ಯತೆಗೆ ಸಾಕ್ಷ್ಯಾಧಾರವಾಗಿದೆ. ಇದು ಅಭಿವೃದ್ಧಿಯ ಚಿಹ್ನೆಯೂ ಆಗಿದೆ. ಅಹ್ಮದಿಯ್ಯತ್‌ನಿಂದ ಹಿಂದೆ ಸರಿಸಲು ಪಯತ್ನಗಳು ನಡೆಯುತ್ತಾ ಇವೆ. ಆದರೆ ಅಲ್ಲಾಹನು ತನ್ನ ವಾಗ್ದಾನ ಪ್ರಕಾರ ಅಭಿವೃದ್ಧಿಯ ಮಾರ್ಗಗಳನ್ನು ತೆರೆಯುತ್ತಾ ಇದ್ದಾನೆ. ಅಭಿವೃದ್ಧಿ ಆಗುತ್ತಾ ಇದೆ. ಇದು ಸಾಬೀತು ಗೊಳಿಸುವುದೇನೆಂದರೆ ತಾತ್ಕಾಲಿಕ ಅಡೆ ತಡೆಗಳಿದ್ದರೂ ಇಸ್ಲಾಮಿನ ಜಯ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೂಲಕ ಮತ್ತು ಅವರ ನಂತರ ಅವರು ಜಾರಿಗೊಳಿಸಿದ ಖಿಲಾಫತ್ ಮೂಲಕವೇ ಸಂಭವಿಸಲಿದೆ ಎಂದು. ಶತ್ರುಗಳು ಅವರಿಗೆ ಇಷ್ಟವಿರುವ

ರೀತಿಯಲ್ಲಿ ತೀವ್ರವಾಗಿ ಎದುರಿಸಲಿ. ಆದರೆ ಅವರಿಗೆ ಸಿಗುವುದು ನಿರಾಶೆ ಮತ್ತು ಸೋಲು ಮಾತ್ರವಾಗಿದೆ.

ಅಲ್ಲಾಹನು ಪ್ರತಿಯೊಬ್ಬ ಅಹ್ಮದಿಗೆ ದೃಢವಿಶ್ವಾಸಿ ಆಗುವಂತೆಯೂ ಸತ್ಕರ್ಮ ಮಾಡುವಂತೆಯೂ ತೌಫೀಕ್ ದಯಪಾಲಿಸಲಿ. ಆರಾಧನೆಯ ಮಟ್ಟವನ್ನು ಪ್ರತಿಯೊಬ್ಬ ಅಹ್ಮದಿ ಉನ್ನತ ಗೊಳಿಸುವಂತಾಗಲಿ. ಆ ಮೂಲಕ ನಾವು ಈ ಅಭಿವೃದ್ಧಿಯಲ್ಲಿ ಭಾಗವಹಿಸುವವರಾಗುವಂತೆ ಆಗಲಿ – ಆಮೀನ್.

(ಖುತ್‌ಬದ ಕೊನೆಗೆ ಹುಝೂರ್, ಮುಕರ್ರಮ್ ಚೌಧರಿ ಹಮೀದ್ ಅಹ್ಮದ್ ಸಾಹೇಬ್ ಇಬ್ನು ಮುಕರ್ರಮ್ ಚೌಧರಿ ಮುಹಮ್ಮದ್ ಸುಲೈಮಾನ್ ಅಖ್ತರ್ ಸಾಹೇಬರವರ ನಮಾಝೆ ಜನಾಝ ಹಾಝಿರ್ ನಿರ್ವಹಿಸುವ ಬಗ್ಗೆ ಪ್ರಕಟಿಸಿದರು. ಅವರು 2017 ಮೇ ದಿನಾಂಕ 20ರಂದು ನಿಧನರಾದರು. ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್).

*****

*Friday Sermon delivered by Hadrath Khaleefatul Masih Al Khamis(atba)*

*At, Masjid Baithul Futhuh, London on 26-05-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon